ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ: 080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.

ಸಂಖ್ಯೆ: ಕಾಶಿಇ/ಶೈವಿ/47/ಸುತ್ತೋಲೆ/2016-17 (ಭಾ-2)

ದಿನಾಂಕ:19.11.2016.

# ಸುತ್ತೋಲೆ

ವಿಷಯ: ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಅಧಿಕಾರಿ (Student welfare officer) ಗಳನ್ನು ನೇಮಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ: ಕಾಶಿಆ/01/ಆಆಶಾ/2016-17 ದಿನಾಂಕ:11.11.2016.

* * * * * *

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೆರವಾಗುವ ನಿಟ್ಟಿನಲ್ಲಿ ಬೋಧಕ ಸಿಬ್ಬಂದಿಯಲ್ಲಿ ಒಬ್ಬರನ್ನು ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಅಧಿಕಾರಿಯನ್ನಾಗಿ ನೇಮಿಸುವಂತೆ ಉಲ್ಲೇಖಿತ ಮಾನ್ಯ ಆಯುಕ್ತರ ಟಿಪ್ಪಣಿಯಲ್ಲಿ ಸೂಚಿಸಲಾಗಿರುತ್ತದೆ.

ಈ ಸಂಬಂಧ, ರಾಜ್ಯದ ಎಲ್ಲಾ ಸರ್ಕಾರಿ ಕಾಲೇಜುಗಳಲ್ಲಿ ಎಸ್.ಸಿ. / ಎಸ್.ಟಿ. ವಿದ್ಯಾರ್ಥಿಗಳಿಗೆ ನೆರವಾಗುವ ನಿಟ್ಟಿನಲ್ಲಿ **"ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಅಧಿಕಾರಿ" (Student welfare officer)** ಯನ್ನಾಗಿ ಒಬ್ಬ ಬೋಧಕ ಸಿಬ್ಬಂದಿಯನ್ನು ನೇಮಿಸಲು ಸೂಚಿಸಲಾಗಿದೆ.

ಸದರಿ ಅಧಿಕಾರಿಯು ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಪಾವತಿ, ಪಠ್ಯ ಪುಸ್ತಕಗಳ ವಿತರಣೆ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ದೊರಕಬಹುದಾದ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಸುಲಲಿತವಾಗಿ ತಲುಪಿಸುವ ನಿಟ್ಟಿನಲ್ಲಿ ಪ್ರತಿನಿತ್ಯ 15-20 ನಿಮಿಷ ಬೋಧಕೇತರ ಅವಧಿಯಲ್ಲಿ ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲಬರ್ಗಾ - ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ರವಾನಿಸಲು ಸೂಚಿಸಲಾಗಿದೆ.
2. ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಪ್ರಾದೇಶಿಕ ಜಂಟಿ ನಿರ್ದೇಶಕರ ಮುಖಾಂತರ) - ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು- ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಲಾಗಿದೆ.
4. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ: 080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.

ಸಂಖ್ಯೆ: ಕಾಶಿಇ/ಶೈವಿ/86/ಸುತ್ತೋಲೆ/2016-17

ದಿನಾಂಕ:22.11.2016.

# ಸುತ್ತೋಲೆ

ವಿಷಯ: ವಿದ್ಯಾರ್ಥಿಗಳಗಾಗಿ ಆಪ್ತ ಸಮಾಲೋಚನೆ (Personal counseling) ನಡೆಸುವ ಬಗ್ಗೆ.

ಉಲ್ಲೇಖ: ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ: ಕಾಶಿಆ/01/ಆಆಶಾ/2016-17 ದಿನಾಂಕ:11.11.2016.

***************

ವಿದ್ಯಾರ್ಥಿಗಳು ಈ ದೇಶದ ಮುಂದಿನ ನಾಯಕರು, ನಾಗರಿಕರು ಮತ್ತು ದೇಶದ ಮುಂದಿನ ಭವಿಷ್ಯವನ್ನು ರೂಪಿಸುವ ರೂವಾರಿಗಳು. ಪದವಿ ಮಟ್ಟದಲ್ಲಿ 17 ರಿಂದ 22 ವರ್ಷ ವಯಸ್ಸಿನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು ಹದಿವಯಸ್ಸಿನ ಸಮಸ್ಯೆಗಳು ಅವರನ್ನು ಕಾಡುವುದು ಸಾಮಾನ್ಯ. ಇಂತಹ ಸಮಸ್ಯೆಗಳನ್ನು ಪ್ರಾರಂಭದಲ್ಲೆ ಗುರುತಿಸಿ ಅವುಗಳಗೆ ಪರಿಹಾರೋಪಾಯ ಕಂಡುಕೊಳ್ಳುವುದು ಅತ್ಯಗತ್ಯ. ಈ ಸಂಬಂಧ ಪ್ರಸಕ್ತ ಸಾಲಿನ ಡಿಸೆಂಬರ್ 15ರ ನಂತರ ಹೊಸ ಸೆಮಿಸ್ಟರ್ ಆರಂಭವಾದ ನಂತರ ಕನಿಷ್ಠ ಪಕ್ಷ ಪ್ರತಿ ಸೆಮಿಸ್ಟರ್‌ಗೆ ಒಂದು ಬಾರಿಯಾದರೂ ಪ್ರತಿ ವಿದ್ಯಾರ್ಥಿಯೊಂದಿಗೆ ಖಾಯಂ ಉಪನ್ಯಾಸಕರೊಬ್ಬರು ಕನಿಷ್ಠ 15-20 ನಿಮಿಷಗಳು ಆಪ್ತ ಸಮಾಲೋಚನೆ (Personal counseling) ಯನ್ನು ಕಡ್ಡಾಯವಾಗಿ ಮಾಡಲು ಸೂಚಿಸಲಾಗಿದೆ. ಕಾಲೇಜುಗಳ ಪ್ರಾಂಶುಪಾಲರು ಒಬ್ಬರು ಅಧ್ಯಾಪಕರನ್ನು **"ಆಪ್ತ ಸಮಾಲೋಚಕರು"** (Personal counselor) ಎಂದು ಆಯ್ಕೆ ಮಾಡಲು ಸೂಚಿಸಲಾಗಿದೆ. ಸದರಿ "ಆಪ್ತ ಸಮಾಲೋಚಕರು" ವಿದ್ಯಾರ್ಥಿಗಳ ಆಪ್ತ ಸಮಾಲೋಚನೆಯನ್ನು ನಡೆಸಲು ಸೂಚಿಸಲಾಗಿದೆ.

**ವಿದ್ಯಾರ್ಥಿಗಳ ಆಪ್ತ ಸಮಾಲೋಚನೆಗೆ (personal counseling) ಈ ಕೆಳಗೆ ತಿಳಿಸಿರುವ ಮಾರ್ಗಸೂಚಿಗಳನ್ನು ಅನುಸರಿಸುವುದು**

1. ಪ್ರಾರಂಭದಲ್ಲಿ ವಿದ್ಯಾರ್ಥಿಗಳ ಕೌಟುಂಬಿಕ ಹಿನ್ನಲೆ ಶೈಕ್ಷಣಿಕ ಹಾಗೂ ಹಣಕಾಸಿನ ಸ್ಥಿತಿಯನ್ನು ಅರಿತುಕೊಳ್ಳಲು ವೈಯಕ್ತಿಕ ಅಂಕಿ ಅಂಶಗಳನ್ನು ಸಂಗ್ರಹಿಸುವುದು.
2. ವಿದ್ಯಾರ್ಥಿಗಳ ಆಂತರಿಕ ಸಮಸ್ಯೆಗಳಾದ ತಾರುಣ್ಯದ ಸಮಸ್ಯೆ, ತಂಡದೊಂದಿಗೆ ಹೊಂದಾಣಿಕೆ, ಕಲಿಕಾ ವಿಧಾನ, ಪರೀಕ್ಷಾ ಫಲಿತಾಂಶ ವ್ಯಕ್ತಿತ್ವ, ಪರಿಸರದ ಬದಲಾವಣೆ, ಕೀಳರಿಮೆ, ಪ್ರೀತಿ, ರ್‍ಯಾಗಿಂಗ್ ಮುಂತಾದವುಗಳನ್ನು ಗುರುತಿಸುವುದು.
3. ಬಾಹ್ಯ ಸಮಸ್ಯೆಗಳಾದ, ಹಣಕಾಸಿನ ಸಮಸ್ಯೆ, ಸಾಮಾಜಿಕ/ಕೌಟುಂಬಿಕ ಸಮಸ್ಯೆ, ಹೆತ್ತವರ ಆರೋಗ್ಯ-ಹವ್ಯಾಸಗಳು, ಸಹ-ಶಿಕ್ಷಣ, ಕಾಲೇಜಿನ ಅಧ್ಯಾಪಕರು ಹಾಗೂ ಸಿಬ್ಬಂದಿ ಸಂಬಂಧಿತ ಸಮಸ್ಯೆ ಮುಂತಾದವುಗಳನ್ನು ಗುರುತಿಸುವುದು.
4. ವಿದ್ಯಾರ್ಥಿಗಳ ಸಮಸ್ಯೆಗಳನ್ನು ಅಧ್ಯಾಪಕರು ವೈಯಕ್ತಿಕ ಸಂವಾದದಿಂದ, ಪ್ರಶ್ನಾವಳಿಗಳ ಅಥವಾ ಇತರರ ಸೂಚನೆಗಳ ಮೂಲಕ ತಿಳಿಯುವುದು.

**5. ವಿದ್ಯಾರ್ಥಿಗಳ ಆಪ್ತ ಸಮಾಲೋಚನೆ ಮಾಡುವಾಗ ಅಧ್ಯಾಪಕರು ಹಾಗೂ ಪ್ರಾಂಶುಪಾಲರು ಗಮನಿಸಬೇಕಾದ ಅಂಶಗಳು:**

- ವಿದ್ಯಾರ್ಥಿಗಳು ಹೇಳುವ ಸಮಸ್ಯೆಗಳನ್ನು ತಾಳ್ಮೆಯಿಂದ ಆಲಿಸುವುದು ಮತ್ತು ವಿದ್ಯಾರ್ಥಿಗಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಸೂಕ್ತ ಅವಕಾಶ ಕಲ್ಪಿಸುವುದು.

- ವಿದ್ಯಾರ್ಥಿಗಳಿಂದಲೇ ಪರಿಹಾರೋಪಾಯಗಳನ್ನು ಪಡೆಯಲು ಯತ್ನಿಸುವುದು.
- ವಿದ್ಯಾರ್ಥಿಗಳ ಕೌಟುಂಬಿಕ ಹಿನ್ನಲೆ ತಿಳಿಯುವುದು.
- ವಿದ್ಯಾರ್ಥಿಯ ನಡವಳಿಕೆಯಲ್ಲಿನ ಕಾಲಾಂತರದ ಬದಲಾವಣೆಯನ್ನು ಗಣನೆಗೆ ತೆಗೆದುಕೊಳ್ಳುವುದು.
- ಗುರಿ ಸಾಧಿಸಲು ಮಾಡಬೇಕಾದ ಪ್ರಯತ್ನಗಳ ಬಗ್ಗೆ ವಿವರವಾಗಿ ತಿಳಿಸುವುದು.
- ಮಾದರಿ ವಿದ್ಯಾರ್ಥಿಗಳನ್ನು ಗುರುತಿಸುವುದು.
- ವಿದ್ಯಾರ್ಥಿಗಳು ಆಪ್ತ ಸಮಾಲೋಚಕರಿಗೆ (Personal counselor) ತಮ್ಮ ಭಾವನೆಗಳನ್ನು ವ್ಯಕ್ತಗೊಳಿಸಲು ಪರೋಕ್ಷ ಮಾರ್ಗಗಳನ್ನು ಒದಗಿಸುವುದು. ಉದಾ:ಸಲಹಾ ಪೆಟ್ಟಿಗೆ ಇಡುವುದು.
- ಸಂಭಾಷಣೆಯ ಸಮಯದಲ್ಲಿ ಅವರ ನಡವಳಿಕೆ/ವರ್ತನೆಗಳನ್ನು ಗಮನಿಸುವುದು.
- ಪಾಲಕರು/ಪೋಷಕರಿಂದ ಸಹಕಾರ ಪಡೆಯುವುದು.

6. **ವಿದ್ಯಾರ್ಥಿಗಳ ಆಪ್ತ ಸಮಾಲೋಚನೆಯಲ್ಲಿ ಪ್ರಾಂಶುಪಾಲರ ಪಾತ್ರ:**

- ವಿದ್ಯಾರ್ಥಿಗಳ ಆಪ್ತ ಸಮಾಲೋಚನಾ ಕಾರ್ಯಕ್ರಮಗಳಿಗೆ ಹಾಜರಾಗುವುದು.
- ಅನುಭವ ಹಾಗೂ ಬದ್ಧತೆ ಇರುವ ಅಧ್ಯಾಪಕರನ್ನು ಗುರುತಿಸುವುದು.
- ಕಾಲೇಜಿನಲ್ಲಿ ಪ್ರತ್ಯೇಕ ವಿದ್ಯಾರ್ಥಿ ಆಪ್ತ ಸಮಾಲೋಚನ ಕೇಂದ್ರ (personal counseling centre) ಸ್ಥಾಪಿಸುವುದು.
- ಆಪ್ತ ಸಮಾಲೋಚನಾ ಕೇಂದ್ರದ ಕಾರ್ಯದ ಮೇಲ್ವಿಚಾರಣೆ ಮಾಡುವುದು.
- ಕಾರ್ಯಕ್ರಮದ ಬಗ್ಗೆ ಆಗಾಗ್ಗೆ ಸಭೆ ನಡೆಸುವುದು.
- ಕಾಲೇಜಿನಲ್ಲಿ ಪಠ್ಯೇತರ ಕಾರ್ಯಕ್ರಮಗಳನ್ನು ನಡೆಸುವುದು.

ಬೋಧಕ ಸಿಬ್ಬಂದಿಗಳು ಅವರ ಬೋಧಕೇತರ ಕರ್ತವ್ಯದ ಅವಧಿಯಲ್ಲಿ ಈ ಕೆಲಸವನ್ನು ನಿರ್ವಹಿಸಬೇಕು. ಈ ಕೆಲಸಕ್ಕೆ ಪ್ರತಿದಿನ ಕೇವಲ 15-20 ನಿಮಿಷ ಮಾತ್ರ ಮೀಸಲಿಡಲು ಸೂಚಿಸಲಾಗಿದೆ. ಆಪ್ತ ಸಮಾಲೋಚನೆಯ ಸಮಯದಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಅವಶ್ಯವಿರುವ ವಿಷಯಗಳನ್ನು ಚರ್ಚಿಸಲು ಸೂಚಿಸಲಾಗಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು.**

ಇವರಿಗೆ: ಸೂಕ್ತ ಕ್ರಮಕ್ಕಾಗಿ,

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲಬರ್ಗಾ - ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ರವಾನಿಸಲು ಸೂಚಿಸಲಾಗಿದೆ.
2. ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಪ್ರಾದೇಶಿಕ ಜಂಟಿ ನಿರ್ದೇಶಕರ ಮುಖಾಂತರ) - ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಪ್ರತಿ.